**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 161/2024 |
| ಸಿ.ಡಬ್ಲೂ | - 12 |
| ಪಿ.ಡಬ್ಲೂ | - 06 |
| ಸಾಕ್ಷಿಯ ಹೆಸರು | - ಮಲ್ಲಪ್ಪ ಯಲ್ಲಪ್ಪ ಕಡದಳ್ಳಿ |
| ವಯಸ್ಸು | - 47 ವರ್ಷ |
| ಉದ್ಯೋಗ | - ಒಕ್ಕಲುತನ |
| ವಾಸ ಸ್ಥಳ | - ತಡಹಾಳ |

ದಿನಾಂಕಃ 19/07/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯವಿಲ್ಲ. ಚಾಸಾ-1, 8 ರಿಂದ 11, 13 ಮತ್ತು 14 ರವರ ಪರಿಚಯವಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿ ನನಗೇನು ಮಾಹಿತಿ ಇಲ್ಲ. ಪ್ರಕರಣಕ್ಕೆ ಸಂಬಂಧಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ದಿನಾಂಕಃ 14-12-2020 ರಂದು ಬೆ.11.15 ಗಂಟೆಗೆ ತಡಹಾಳ-ಶಲವಡಿ ರಸ್ತೆಯ ಮಧ್ಯ ಈಶ್ವರ ಗುಡಿಯ ಹತ್ತಿರ ಶಿವಪ್ಪ ಮಲ್ಲಾಪೂರ ರವರ ಜಮೀನಿನ ಎದುರಿಗೆ 1 ನೇ ಆರೋಪಿ ಚಾಲನಾ ಪರವಾನಗೆ ಹೊಂದದೇ 2 ನೇ ಆರೋಪಿಯ ಮೋಟಾರ ಸೈಕಲ್ ಸಂಃ KA-25-HD-1665 ನೇದ್ದನ್ನು ಶಲವಡಿ ಕಡೆಯಿಂದ ತಡಹಾಳ ಕಡೆಗೆ

ಅತೀ ವೇಗ ಹಾಗೂ ಅಲಕ್ಷತನದಿಂದ ಮಾನವ ಜೀವಕ್ಕೆ ಅಪಾಯಕಾರಿಯಾಗುವ ರೀತಿಯಲ್ಲಿ ಚಲಾಯಿಸಿ ತಡಹಾಳ ಕಡೆಯಿಂದ ಶಲವಡಿ ಕಡೆಗೆ ಹೊರಟಿದ್ದ ಚಾಸಾ-8 ರವರು ಚಲಾಯಿಸುತ್ತಿದ್ದ ಮೋಟಾರ ಸೈಕಲ್ ಸಂಃ KA-26-S-9489 ನೇದ್ದಕ್ಕೆ ಅಪಘಾತ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ಚಾಸಾ-8 ರವರ ಬಲಗಾಲಿನ ಹೆಬ್ಬೆರಳು ಕತ್ತರಿಸುವಂತೆ ಮಾಡಿ ಭಾರೀ ಗಾಯ ಪಡಿಸಿ ತನ್ನ ಹಿಂದೆ ಕುಳಿತಿದ್ದ ಚಾಸಾ-9 ಮತ್ತು ಚಾಸಾ-10 ರವರಿಗೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿತರ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಅಲ್ಲಗೆಳೆದ ಭಾಗವನ್ನು **ನಿಪಿ-6** ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯವಾಗಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ ಎಸ್ ವಿ ಎಂ ವಕೀಲರಿಂದಃ**

ಏನು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**